ದೆಹಲಿಯಿಂದ ಲೋಹಿಯಾಗೆ ಪತ್ರ ಬರೆದಿದ್ದರು:

'ಪ್ರಿಯ ರಾಮಮನೋಹರ್,

ನೀವು ಇನ್ನೂ ಹಿಂದೆ ಹೇಗಿದ್ದಿರೋ ಹಾಗೇ ಇರುವಿರೇನು? ಉಜ್ವಲವಾಗಿ ಹಾಗೂ ಕಡು ಬುದ್ಧಿವಂತನಾಗಿ; ಕೊಂಚ ಹಾದಿ ಬಿಟ್ಟವನಾಗಿ ಹಾಗೂ ಅಲೆಮಾರಿಯಾಗಿ? ಜೀವನ ನಿಮ್ಮನ್ನು ಕಲ್ಲಾಗಿಸಿದೆಯೆ? ಇವೆಲ್ಲ ನೀವು ಉತ್ತರಿಸಬಹುದಾದ ಪ್ರಶ್ನೆಗಳಲ್ಲ; ನಾನೇ ನಿಮ್ಮನ್ನು ಭೇಟಿ ಮಾಡಿ ತಿಳಿದುಕೊಳ್ಳಬೇಕಾದ ವಿಷಯಗಳು. ಈ ಸಲ ನಾವು ಭೇಟಿಯಾದಾಗ, ನೀವು ಎಲ್ಲೋ ಚಿಪ್ಪಿನೊಳಗೆ ಹುದುಗಿಕೊಂಡು ನನ್ನನ್ನು ನೋಡುತ್ತಿದ್ದೀರೇನೋ ಎನ್ನಿಸುವಂತೆ ನೋಡಲಿಕ್ಕಿಲ್ಲ ಎಂದುಕೊಂಡಿರುವೆ.'

ಬ್ರಿಟಿಷರು ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಗಳಿಗೆ ಹತ್ತಿರವಾಗತೊಡಗಿತ್ತು; ಗಾಂಧೀಜಿಯ 'ಮಕ್ಕಳಂತೆ' ಇದ್ದ ನೆಹರೂ, ಪಟೇಲ್, ಮೌಲಾನ, ರಾಜಾಜಿ ಮೊದಲಾದವರು ಗಾಂಧೀಜಿಯ ಬಗ್ಗೆ ಅಸಂತೃಪ್ತರಾಗತೊಡಗಿದ್ದರು. ಇದಕ್ಕೆ ಗಾಂಧೀಜಿ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಇಬ್ಬರೂ ಅಧಿಕಾರ ಹಂಚಿಕೊಳ್ಳುವುದರ ಪರವಾಗಿದ್ದದ್ದು ಕೂಡ ಕಾರಣವಾಗಿತ್ತು. ಈ ಘಟ್ಟದಲ್ಲಿ ಲೋಹಿಯಾ, ಜೆ.ಪಿ. ಥರದವರಿರುವ ಪರ್ಯಾಯ ಕೇಂದ್ರವೊಂದರ ಬಗ್ಗೆ ಗಾಂಧೀಜಿ ಯೋಚಿಸಿದ್ದರು; ಆದರೆ ಈ ಇಬ್ಬರೂ ಈಗ ತಾನೇ ಜೈಲುವಾಸ ಅನುಭವಿಸಿ ಬಂದಿದ್ದಾರೆ ಎಂಬ ಅನುಕಂಪದ ಜೊತೆಗೆ, ಅವರ ಮಾದರಿಯ ಸಮಾಜವಾದದ ಬಗ್ಗೆ ಗಾಂಧೀಜಿಗೆ ಇನ್ನೂ ನಂಬಿಕೆ ಹುಟ್ಟಿರಲಿಲ್ಲ.

ಸೆರೆಮನೆಯಲ್ಲಿ ಕುಗ್ಗಿದ್ದ ಲೋಹಿಯಾರ ಮೈ ಮನಸ್ಸು ಇನ್ನೂ ಹತೋಟಿಗೆ ಬಂದಿರಲಿಲ್ಲ. ಆರೋಗ್ಯ ತಪಾಸಣೆಗಾಗಿ ಮುಂಬಯಿಗೆ ಹೊರಟ ಲೋಹಿಯಾರನ್ನು ಗೋವಾದಲ್ಲಿ ವಿಶ್ರಾಂತಿ ಪಡೆಯಲು ಜೂಲಿಯೋ ಮೆನೆಜಿಸ್ ಕರೆದರು. ಲೋಹಿಯಾರ ಜರ್ಮನಿಯ ಸಹಪಾಠಿ ಮೆನೆಜಿಸ್ ಲೇಖಕರಾಗಿ, ವೈದ್ಯರಾಗಿ ಹೆಸರಾಗಿದ್ದರು. ಲೋಹಿಯಾ ಗೋವಾಕ್ಕೆ ಬಂದಿಳಿದರು.

ಬ್ರಿಟಿಷರು ಭಾರತಕ್ಕೆ ಬರುವ ಮೊದಲೇ ಗೋವಾ ಪೋರ್ಚುಗೀಸರ ವಸಾಹತುವಾಗಿತ್ತು. ಹೊಸ ನಾಡುಗಳನ್ನು ಕಂಡು ಹಿಡಿಯಲು ಹೊರಟ ಪಶ್ಚಿಮದ ಸಾಹಸಿಗಳಿಂದಾಗಿ ಸ್ವಾತಂತ್ರ್ಯ ಕಳೆದುಕೊಂಡ ದೇಶಿ ನಾಡುಗಳ ಪಟ್ಟಿಯಲ್ಲಿ ಗೋವಾ ಕೂಡ ಇತ್ತು! ಪೋರ್ಚುಗಲ್ ದೇಶದಿಂದ ಹೊರಟ ವಾಸ್ಕೋ ಡ ಗಾಮ ಯುರೋಪಿನಿಂದ ಏಷ್ಯಾ ತಲುಪುವ ಸಮುದ್ರಮಾರ್ಗ ಕಂಡು ಹಿಡಿದ; ಆ ಮಾರ್ಗ ಹಿಡಿದು ಬಂದ ಪೋರ್ಚುಗೀಸರು ವಶಪಡಿಸಿಕೊಂಡ ಪ್ರದೇಶಗಳಲ್ಲಿ ಗೋವಾ ಕೂಡ ಒಂದು. ಒಬ್ಬ ಸಾಹಸಿಯ ಸಂಶೋಧನೆ ಮತ್ತೊಂದು ನಾಡಿಗೆ ಶಾಪವಾಗುವುದು ಹೀಗೆ!

ಇದೇ ಪೋರ್ಚುಗೀಸರು ಹದಿನಾರನೆಯ ಶತಮಾನದಲ್ಲಿ ದಕ್ಷಿಣ ಕನ್ನಡದ ಆಯಕಟ್ಟಿನ ಜಾಗದಲ್ಲಿದ್ದ ಉಲ್ಲಾಲವನ್ನು ಆಕ್ರಮಿಸಿಕೊಳ್ಳಲು ಬಂದರು. ಪೋರ್ಚುಗೀಸರ ನಾವೆಗಳನ್ನು ನಾಲ್ಕು ಬಾರಿ ಹಿಮ್ಮೆಟ್ಟಿಸಿದ ತುಳುನಾಡಿನ ಉಲ್ಲಾಳದ ರಾಣಿ ಅಬ್ಬಕ್ಕದೇವಿಯನ್ನು ವಸಾಹತುಶಾಹಿ ವಿರುದ್ಧದ ಮೊದಲ ಹೋರಾಟಗಾರ್ತಿ ಎಂದು ಬಣ್ಣಿಸಲಾಗಿದೆ.

ಭಾರತದ ಹಲವು ಭಾಗಗಳಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿದ್ದಾಗ, ಗೋವಾ ದೇಶೀಯರಲ್ಲೂ ಸ್ವಾತಂತ್ರ್ಯದ ಹಂಬಲ ಗರಿಗಟ್ಟಿಕೊಳ್ಳತೊಡಗಿತ್ತು. ಸಂಘಟಿತ ಹೋರಾಟ ಶುರುವಾಗಿರಲಿಲ್ಲ. ಜನರ ಹಕ್ಕುಗಳನ್ನು ನಿರ್ಬಂಧಿಸಿದ್ದ ಪೋರ್ಚುಗೀಸ್ ಸರ್ಕಾರ ಗೋವಾ ನಿವಾಸಿಗಳ ಮದುವೆ, ಧಾರ್ಮಿಕ ಮೆರವಣಿಗೆ, ಪತ್ರಿಕೆಗಳು ಎಲ್ಲದರ ಮೇಲೂ ನಿರ್ಬಂಧ ಹೇರಿತ್ತು.

ಗೋವಾ ಈ ಸ್ಥಿತಿಯಲ್ಲಿದ್ದಾಗ ಭಾರತದ ಸ್ವಾತಂತ್ರ್ಯ ಚಳುವಳಿಯ ಹೊಸ ಹೀರೋ ಲೋಹಿಯಾ ಗೋವಾದಲ್ಲಿರುವ ಸುದ್ದಿ ಜನರ ಕಿವಿ ಮುಟ್ಟಿತು.

ಲೋಹಿಯಾ ಬರೆಯುತ್ತಾರೆ: 'ನಾನು ಮಿತ್ರ ಮೆನೆಜಿಸ್ ಅವರ ಮನೆಯಲ್ಲಿ ತಂಗಿದ್ದ ಮೂರನೆಯ ದಿನವೋ, ನಾಲ್ಕನೆಯ ದಿನವೋ ನನ್ನನ್ನು ಕಾಣಲು ಹಲ ಬಗೆಯ ಜನರು ಬಂದರು. ಅವರಲ್ಲಿ ವಿದ್ಯಾರ್ಥಿಗಳು, ವ್ಯಾಪಾರಿಗಳು, ಅಧ್ಯಾಪಕರು, ಪೊಲೀಸರು, ಸರಕಾರಿ ಉದ್ಯೋಗಿಗಳು, ಇನ್ನೂ ಅನೇಕರು ಇದ್ದರು. ಗೋವಾದಲ್ಲಿ ತಮಗೆ ಯಾವ ನಾಗರಿಕ ಹಕ್ಕುಗಳೂ ಇಲ್ಲ; ಪೊಲೀಸರ ಅಪ್ಪಣೆ ಇಲ್ಲದೆ ಒಂದು ಲಗ್ನಪತ್ರಿಕೆಯನ್ನು ಕೂಡ ಅಚ್ಚು ಹಾಕಿಸುವುದು ಸಾಧ್ಯವಿಲ್ಲ... ಇವೇ ಮುಂತಾದ

